## ASPHALTING OF ROAD FROM HAGALVADI TO TIPTUR

360. Sri N. BASAVAIAH (Chicknayakanahalli).—

Will the Minister for Public Works and Electricity be pleased to state :—

(a) whether they have received any representations from the public for asphalting the road running from Hagalvadi to Tiptur **via** C. N. Hally and Settikere ;

(b) if so, the steps taken by them to asphalt the road considering the hardship caused to the bus owners and the public ?

Sri H. M. CHANNABASAPPA (Minister for Public Works and Electricity).—

(a) No.

(b) Does not arise in view of reply to clause (a) above.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ ಈ ವಿಚಾರದಲ್ಲಿ ಅನೇಕ ಬಸ್ ಮಾಲೀಕರಿಂದಲೂ ಮತ್ತು ಪಂಚಾಯಿತಿಗಳಿಂದಲೂ ಸರ್ಕಾರಕ್ಕೆ ಮನವಿಗಳು ಬಂದಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆಯನ್ನು ಉತ್ತಮ ಪಡಿಸಬೇಕೆಂಬ ಅಂಶವನ್ನು ನಾನೂ ಒಪ್ಪುತ್ತೇನೆ. ಆದರೆ ಹಣದ ಅನುಕೂಲತೆ ಬಂದಹಾಗೆ ಇದನ್ನು ಉತ್ತಮ ಪಡಿಸಲಾಗುತ್ತದೆ.

ಶ್ರೀ ಎನ್. ಬಸವಯ್ಯ.—ಈ ರಸ್ತೆಯಲ್ಲಿ ಓಡತಕ್ಕ ಅನೇಕ ಬಸ್ಸುಗಳು ಊರುಗಳ ಮಧ್ಯೆ ಹಾದು ಹೋಗುವುದರಿಂದ ಆ ರಸ್ತೆಪಕ್ಕದಲ್ಲಿ ವಿಪರೀತ ಧೂಳು ಏಳುತ್ತಿರುವುದರಿಂದ ಅಲ್ಲಿ ಜನರು, ಪ್ರಯಾಣಿಕರೂ ಕುಳಿತುಕೊಳ್ಳುವದಕ್ಕೆ ಸಾಧ್ಯವಿಲ್ಲವಾದ ಕಾರಣ ಈ ರಸ್ತೆಯನ್ನು ಬೇಗ ಅಸ್ಫಾಲ್ಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಹೀಗೆ ಯಾವ ಯಾವ ರಸ್ತೆಗಳು ಊರು ಮಧ್ಯದಲ್ಲಿ ಹಾದು ಹೋಗುತ್ತಿವೆಯೋ ಅಂಥ ಎಲ್ಲಾ ರಸ್ತೆಗಳನ್ನೂ ಅಸ್ಫಾಲ್ಟ್ ಮಾಡಬೇಕೆಂದು ಒಂದು ಸಾರ್ವತ್ರಿಕ ಆಜ್ಞೆಯನ್ನು ಸರ್ಕಾರ ಹೊರಡಿಸಿದೆ. ಆದರೆ ಎಲ್ಲ ರಸ್ತೆಗಳಲ್ಲಿ ಏಕ ಕಾಲಕ್ಕೆ ಅಸ್ಫಾಲ್ಟ್ ಮಾಡುವುದಕ್ಕಾಗುವುದಿಲ್ಲ. ಆತುರದಿಂದ ಕೆಲಸ ಮಾಡಿದರೆ ಹಣ ನಷ್ಟವಾಗುತ್ತದೆ. ಅದಕ್ಕೆ ಮೊದಲು ಅಸ್ಫಾಲ್ಟ್ ಮಾಡತಕ್ಕ ರಸ್ತೆಯಲ್ಲಿ ಸಬ್‌ಗ್ರೇಡಾಗಬೇಕು. ಆದಾದನಂತರ ಅಲ್ಲಿ ಅಸ್ಫಾಲ್ಟ್ ಮಾಡಿದರೆ ಅದು ಕೆಲವು ಕಾಲವಾದರೂ ಇರುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್ನೆಷ್ಟು ವರ್ಷಗಳಲ್ಲಿ ಅಸ್ಫಾಲ್ಟ್ ಮಾಡಿಸಿಕೊಡುತ್ತೀರಾ ?

ಶ್ರೀ ಚ್. ಎಂ. ಚನ್ನಬಸಪ್ಪ —ಎಲ್ಲ ರಸ್ತೆಗಳನ್ನೂ ಅಸ್ಫಾಲ್ಟ್ ಮಾಡುವುದಕ್ಕಾಗುವದಿಲ್ಲ. ಊರು ಮಧ್ಯೆ ಹಾದು ಹೋಗತಕ್ಕ ದೂರ ಎಷ್ಟಿರುತ್ತದೋ ಅಷ್ಟನ್ನು ಮಾತ್ರ ಅಸ್ಫಾಲ್ಟ್ ಮಾಡ ಬೇಕೆಂದು ಹೇಳಿದೆ ನೆವೆ. ಇದನ್ನೂ ಮಾಡಲಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ.—ಇಲ್ಲಿ ಸುಮಾರು 60 ಬಸ್ಸುಗಳು ಓಡುತ್ತಿವೆ. ರಸ್ತೆಯ ಅವಶ್ಯಕತೆಯನ್ನು ನೋಡಿಕೊಂಡು, ಹಣ ಒದಗಿದಂತೆ ಕೆಲಸವನ್ನು ಮಾಡುತ್ತೇವೆಂದರೆ ಇದು ತಮ್ಮ ಇಷ್ಟಬಂದಹಾಗೆ ಕೆಲಸ ಮಾಡಿದಂತಾಯಿತು. ಯಾವಾಗ ಮಾಡುತ್ತೀರೆಂಬುದಕ್ಕೆ ಭರವಸೆ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇತ್ತೀಚೆಗೆ ಎಲ್ಲಾ ರಸ್ತೆಗಳು ಪ್ರಾಮುಖ್ಯವಾಗುವುದಕ್ಕೆ ಹತ್ತಿವೆ. ಪ್ರತಿಯೊಂದು ರಸ್ತೆಯಲ್ಲೂ ಟ್ರಾಫಿಕ್ ಹೆಚ್ಚುತ್ತಿದೆ. ಬಹುಶಃ ಈ ಕಾರ್ಯವನ್ನು ಏಕ ಕಾಲಕ್ಕೆ ಎಲ್ಲ ಕಡೆಗಳಲ್ಲೂ ಮಾಡುವುದಕ್ಕಾಗುವುದಿಲ್ಲ ಸಬ್‌ಗ್ರೇಡ್ ಮಾಡಿ ಇದನ್ನು ಮಾಡಬೇಕು. ಬರಿ ಜಲ್ಲಿ ಒಂದನ್ನು ಹಾಕಿದ್ದರೆ ಸಾಲದು. ಜಲ್ಲಿಹಾಕಿದ್ದ ರಸ್ತೆ ಎಂದು ಸಬ್‌ಗ್ರೇಡ್ ಮಾಡಿದರೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಆದು ತಕ್ಷಣ ಕಿತ್ತು ಹೋಗುತ್ತದೆ. ನಾವು ಖರ್ಚುಮಾಡಿದ ದುಡ್ಡು ನಷ್ಟವಾಗುತ್ತದೆ. ಈ ರಸ್ತೆ ವಿಚಾರದಲ್ಲಿ ಆದಷ್ಟು ಬೇಗ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಈ ರಸ್ತೆಗಳು ನಿರ್ಮಾಣವಾಗಿ ಸುಮಾರು 25 ವರ್ಷಗಳಾಗಿದೆ. ತಾವು ಹೇಳಿದ ಪ್ರಕಾರ ಅನೇಕ ಸಲ ಈ ರಸ್ತೆಗಳಿಗೆ ಜಲ್ಲಿ ಹಾಕಿದ್ದಾರೆ. ಆದರೂ ಅದು ನಿಂತಿಲ್ಲ. ತಾವು ಮಾಡಿಸಿಕೊಡುತ್ತೇನೆ ಎಂದು ಸಾಮಾನ್ಯವಾಗಿ ಹೇಳಿಕೆ ಕೊಡುತ್ತೀರಿ, ನಿರ್ದಿಷ್ಟವಾಗಿ ಈ ರೋಡನ್ನು ಯಾವಾಗ ಮಾಡಿಸಿಕೊಡುತ್ತೀರಿ ಎಂದು ಹೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ರಸ್ತೆಗಳಿಗೂ ಟಾರ್ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಈ ರಸ್ತೆಯಲ್ಲಿ ಒಬ್ಬರೂ ಪ್ರಯಾಣ ಮಾಡುವ ಹಾಗಿಲ್ಲ, ತಾವು ಇದರ ಬಗ್ಗೆ ಜನರಲ್ ಸ್ಟೇಟ್‌ಮೆಂಟ್ ಮಾಡುತ್ತೀರಿ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತೇನೆ, ನಿರ್ದಿಷ್ಟವಾಗಿ ಈ ರಸ್ತೆಯನ್ನು ಎಷ್ಟು ಬೇಗ ಮಾಡಿಸಿಕೊಡುತ್ತೀರಿ ಎಂಬುದನ್ನು ಹೇಳಬೇಕು ?

ಅಧ್ಯಕ್ಷರು.—ಸೂರ್ಯ ಹುಟ್ಟುವುದರೊಳಗೆ, ಸೂರ್ಯ ಮುಳುಗುವುದರೊಳಗೆ ಮಾಡಿಸಿ ಕೊಡುತ್ತೇನೆಂದು ಹೇಳಲಿಕ್ಕಾಗುತ್ತದೆಯೇ ? ಮಾನ್ಯ ಸದಸ್ಯರು ದಯಮಾಡಿ ಕೂತುಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದನ್ನು ಆರು ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಮಾಡಿಸಿ ಕೊಡುತ್ತೇವೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚನ್ನಬಸಪ್ಪನವರು ರಸ್ತೆಗಳನ್ನು ಆಸ್ಫಾಲ್ಟ ಮಾಡಲಕ್ಕೆ ಹೆಚ್ಚು ಆದ್ಯತೆ ಕೊಡುವುದಿಲ್ಲ ಎಂದು ಪದೇಪದೇ ಹೇಳುತ್ತಾ ಇರುತ್ತಾರೆ. ನಾನು ಮೊನ್ನೆ ಅವರ ಕಾನ್‌ಸ್ಟಿಟ್ಯೂಯನ್ಸಿಗೆ ಹೋಗಿದ್ದೆ, ಅಲ್ಲಿ ರಸ್ತೆಗಳು ಆಸ್ಫಾಲ್ಟ್ ಆಗುತ್ತಿದ್ದವು. ಆದ್ದರಿಂದ ನಿಮ್ಮ ತಾಲ್ಲೂಕಿನಲ್ಲೂ ರಸ್ತೆಗಳು ಆಸ್ಫಾಲ್ಟ್ ಆಗುವುದು ಬೇಡ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಗ್ರಾಮಗಳಲ್ಲಿಯೂ ಆಗುತ್ತದೆ, ಎಷ್ಟೋ ವರ್ಷಗಳ ಹಿಂದೆ ಯಾವ ಯಾವುದಕ್ಕೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ, ಕಂಟ್ರಾಕ್ಟ್ಯುಯರ್ ಅಪ್ಲಿಕೇಷನ್ ಏರ್ಪಾಡು ಆಗಿದೆ, ಅಂಥಾದ್ದು ಮಾತ್ರ ಕೆಲಸ ನಡೆಯುತ್ತಿದೆ. ಆಸ್ಫಾಲ್ಟ್ ಕೆಲಸಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿಲ್ಲ, ಏಕೆ ಅಂದರೆ, ಹಣವನ್ನು ಉತ್ತಮವಾದಂಥ ರಸ್ತೆಗಳನ್ನು ವ್ಯವಸ್ಥೆ ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ. ಈಗ ಇರತಕ್ಕ ಸ್ಥಿತಿಯಲ್ಲಿ ಅನೇಕ ಕಡೆ ರಸ್ತೆಗಳನ್ನು ಆಸ್ಫಾಲ್ಟ್ ಮಾಡಬೇಕು ಎನ್ನತಕ್ಕ ಆತುರದಲ್ಲಿ ಟಾರ್ ಹಾಕಿಕೊಂಡು ಬಿಡುವುದು, ಇದರಿಂದ ಹೆಚ್ಚು ತೊಂದರೆಯಾಗುತ್ತದೆಯೇ ವಿನಹ ಲಾಭವಾಗುವುದಿಲ್ಲ. ತಕ್ಷಣದಲ್ಲಿಯೇ ಇದು ಕಿತ್ತುಹೋಗುತ್ತದೆ ಅವರು ಹೇಳುತ್ತಿರುವ ರಸ್ತೆಯಲ್ಲಿ ಟ್ರಾಫಿಕ್ ಲೋಡ್ ದಿನೇ ದಿನೇ ಹೆಚ್ಚಾಗುತ್ತಿದೆ. ಆ ರಸ್ತೆಗೆ ಟ್ರಾಫಿಕ್ ಲೋಡನ್ನು ತೆಗೆದುಕೊಳ್ಳುವ ಶಕ್ತಿಯಿಲ್ಲ. ಸಬ್ ಗ್ರೇಡ್ ಎಲ್ಲೆಲ್ಲಿ ಆಗಿಲ್ಲ ಅಲ್ಲಿ ಬಂದೋ ಬಸ್ತಾಗಿ ಮಾಡಿ ಎಂದು ಆಜ್ಞೆ ಮಾಡುತ್ತೇವೆ. ಅದಾದ ಕೆಲವು ದಿವಸಗಳ ನಂತರ, ಆಸ್ಫಾಲ್ಟ್ ಮಾಡತಕ್ಕ ಕೆಲಸವನ್ನು ಹಣದ ಅವಶ್ಯಕತೆಯನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಎಚ್ ಎಸ್. ಸಿದ್ದಪ್ಪ.—ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದು ಏನೆಂದರೆ ತಾವು ಈ ಕೆಲಸವನ್ನು ಮಾಡಿಕೊಡುತ್ತೇವೆಂದು ಹೇಳಿ, ಇಲ್ಲವಾದರೆ ಇಲ್ಲವೆಂದು ಹೇಳಿ. ಹಾವು ಸಾಯಬಾರದು, ಕೋಲೂ ಮುರಿಯಬಾರದು ಎನ್ನುವಂತೆ ಉತ್ತರವನ್ನು ತಾವು ಕೊಡಬೇಡಿ. ಇನ್ನು ಐದೆರಡು ವರ್ಷಗಳಲ್ಲಿ ಈ ಕೆಲಸವನ್ನು ಮಾಡಿಕೊಡುತ್ತೀರಾ ? ಇಷ್ಟಾದರೂ ಮಾಡಿದರೆ ನಿಮ್ಮ ಮೇಲೆ ಅಭಿಮಾನ ಇರುತ್ತದೆ. ಏನೋ ಒಂದು ಉತ್ತರ ಹೇಳಿ ನಮ್ಮನ್ನು ಓಡಿಸಿಬಿಡುತ್ತೀರಿ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿ ಹೇಳುತ್ತೀರಿ, ಆದರೆ ಕೆಲಸ ಮಾಡುವುದಿಲ್ಲ, ಇದಕ್ಕೆ ನಮ್ಮನೆ ಏಕೆ ಭರವಸೆ ಕೊಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ವೆಜರ್ ರೋಡ್, ಅಲ್ಲಿ ಸಬ್‌ಗ್ರೇಡ್ ಹಾಕುವುದಕ್ಕೆ ಪ್ರಾರಂಭಮಾಡಿ ಎಂದು ಹುಕುಂ ಮಾಡುತ್ತೇವೆಂದು ಹೇಳಿದ್ದೇನೆ. ಮಾಡಿಕೊಡುತ್ತೇನೆಂದು ಹೇಳಿದರೂ ಕೂಡ ಎದ್ದೆದ್ದು ಮಾತನಾಡಿದರೆ ಹೇಗೆ ?